> ನನಗೆ ಹಾಸ್ಯ ಸಂಭಾಷಣೆಗಳನ್ನು ಬರೆಯುವುದು ಇಷ್ಟ. ಅದು ಮಜವಾಗಿರುತ್ತದೆ. ಹಾಗಂತ ನನ್ನ ಪಾತ್ರಗಳೆಲ್ಲ ಹಾಸ್ಯಪಾತ್ರಗಳಾಗಿಬಿಟ್ಟರೆ ಅದು ಬೋರಿಂಗ್ ಆಗಿಬಿಡುತ್ತದೆ. ಆ ಹಾಸ್ಯಪಾತ್ರಗಳು ನನ್ನ ಮನಸ್ಸಿನ ಸಮತೋಲನವನ್ನು ಕಾಪಾಡುವಂತಹವು.

ಸರ್ವೈವಲ್ ಟ್ರೈನಿಂಗ್‌ನಂತೆ. ಕಲಾತ್ಮಕ ಸಂವೇದನೆಯಷ್ಟೇ ದೈಹಿಕ ದೃಢತೆಯೂ ಮುಖ್ಯ.

**◆ ನಿಮ್ಮ ಪಾತ್ರಗಳ ಕುರಿತು ಹೇಳಿ. ಅವುಗಳನ್ನು ನೈಜ ಅನ್ನಿಸುವಂತೆ ಹೇಗೆ ಚಿತ್ರಿಸುವಿರಿ? ಅವು ಕತೆಯಿಂದ ಸ್ವತಂತ್ರವಾಗಿರುವುದು ಮುಖ್ಯ ಎಂದು ನಿಮಗನ್ನಿಸುತ್ತದೆಯೇ?**

ನಿಜ ಜೀವನದಲ್ಲಿನ ಮನುಷ್ಯರನ್ನು ಗಮನಿಸುವ ಮೂಲಕವೇ ಪಾತ್ರಗಳನ್ನು ರೂಪಿಸುತ್ತೇನೆ. ನನಗೆ ಹೆಚ್ಚು ಮಾತಾಡುವುದು ಇಷ್ಟವಾಗುವುದಿಲ್ಲ. ಬೇರೆಯವರ ಕತೆಗಳನ್ನು ಕೇಳಲು ಇಷ್ಟ. ಅವರೆಂತಹ ಮನುಷ್ಯರು ಎಂದು ಜಡ್ಜ್ ಮಾಡಲು ಹೋಗುವುದಿಲ್ಲ. ಅವರಿಗೆ ಏನನ್ನಿಸುತ್ತಿದೆ, ಅವರೆಲ್ಲಿಗೆ ಹೋಗುತ್ತಿದ್ದಾರೆ ಎನ್ನುವುದನ್ನು ಕುರಿತು ಯೋಚಿಸುತ್ತೇನೆ. ಅವನಿಂದ ಒಂದಿಷ್ಟು ಅವಳಿಂದ ಒಂದಿಷ್ಟು ಅಂಶಗಳನ್ನು ಸಂಗ್ರಹಿಸುತ್ತೇನೆ. ನನ್ನ ಪಾತ್ರಗಳು ನನಗೆ ನೈಜವಾದದ್ದೇ. ಇದು ವಾಸ್ತವವೋ ಅವಾಸ್ತವವೋ ನನಗೆ ಗೊತ್ತಿಲ್ಲ. ಬರೆಯುತ್ತಿರುವ ಆ ಆರೇಳು ತಿಂಗಳುಗಳು ಅವರೆಲ್ಲ ನನ್ನೊಳಗೆ ಇರುತ್ತಾರೆ. ಅದೊಂದು ಬೇರೆಯೇ ಪ್ರಪಂಚ.

**◆ ನಿಮ್ಮ ಮುಖ್ಯಪಾತ್ರಗಳು ನಿಮ್ಮ ನಿರೂಪಣೆಯ ಅದ್ಭುತ ಜಗತ್ತಿನಲ್ಲಿ ನಿಮ್ಮ ದೃಷ್ಟಿಕೋನಗಳನ್ನು ಬಿಂಬಿಸುವ ಕನಸೊಳಗಿನ ಕನಸುಗಾರರಂತೆ ಕಾಣುತ್ತಾರೆ.**

ಅದು ಹೀಗೂ ಆಗಬಹುದು ನೋಡಿ : ನನಗೊಬ್ಬ ಅವಳಿ ಸೋದರನಿದ್ದಾನೆ. ನಾವು ಎರಡು ವರ್ಷದವರಾಗಿದ್ದಾಗ ನಮ್ಮಲ್ಲೊಬ್ಬ ಕಿಡ್ನಾಪ್ ಆಗುತ್ತಾನೆ. ಅವನನ್ನು ದೂರದ ಯಾವುದೋ ಊರಿಗೆ ಕರೆದುಕೊಂಡು ಹೋಗಿಬಿಡುತ್ತಾರೆ. ನಾವು ಪರಸ್ಪರ ಭೇಟಿ ಆಗಿರುವುದಿಲ್ಲ. ನನ್ನ ಮುಖ್ಯಪಾತ್ರಧಾರಿ ಅವನು ಎಂದುಕೊಳ್ಳುತ್ತೇನೆ. ನನ್ನದೇ ಭಾಗ, ಆದರೆ ನಾನಲ್ಲ. ನಾವಿಬ್ಬರೂ ಒಬ್ಬರನ್ನೊಬ್ಬರು ದೀರ್ಘಕಾಲ ಭೇಟಿಯಾಗಿರುವುದಿಲ್ಲ. ಡಿಎನ್‌ಎ ಪ್ರಕಾರ ನಾವಿಬ್ಬರೂ ಒಂದೇ. ಆದರೆ, ನಮ್ಮಿಬ್ಬರ ಪರಿಸರ ಬೇರೆ. ನಮ್ಮ ಆಲೋಚನೆಗಳು ಬೇರೆ. ಪ್ರತಿಸಲ ಪುಸ್ತಕ ಬರೆಯುವಾಗಲೂ ಹೀಗೆ ಮತ್ತೊಬ್ಬನಾಗಿ ಬರೆಯುತ್ತಿರುತ್ತೇನೆ. ಕೆಲವೊಮ್ಮೆ ನಾನು ನಾನಾಗೇ ಇರುವ ಕುರಿತು ಬೇಸರವಾಗುತ್ತದೆ. ಈ ರೀತಿ ಆ ಬೇಸರದಿಂದ ತಪ್ಪಿಸಿಕೊಳ್ಳುತ್ತೇನೆ. ಅದೊಂದು ಫ್ಯಾಂಟಸಿ. ನಿಮಗದು ಸಾಧ್ಯವಾಗದಿದ್ದರೆ ಪುಸ್ತಕ ಬರೆದು ತಾನೇ ಏನು ಪ್ರಯೋಜನ?

**◆ ನಿಮ್ಮ ಹಿಂದಿನ ಪುಸ್ತಕಗಳಿಗಿಂತ ಈಗಿನ ಪುಸ್ತಕಗಳು ರಚನಾವಿನ್ಯಾಸದಲ್ಲಿ ಬದಲಾಗಿವೆ ಅಲ್ಲವೇ?**

ಹೌದು. ನನ್ನ ಮೊದಲೆರೆಡು ಪುಸ್ತಕಗಳು ಜಪಾನಿನಿಂದ ಹೊರಗೆ ಪ್ರಕಟವಾಗಲಿಲ್ಲ. ಅವು ಅಪ್ರಬುದ್ಧ ರಚನೆಗಳು ಅನ್ನಿಸಿತು.

**◆ ಅದರಲ್ಲಿನ ಕೊರತೆಗಳೇನು?**